ಓ.ಎಸ್. ನಂಬರ 17 /2023

ಪಿ . ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 26-04-2024.

**ಪಾಟೀ ಸವಾಲುಃ 1 ರಿಂದ 8 ನೇ ಪ್ರತಿವಾದಿ ಪರ ಶ್ರೀ. ಆರ್.ವಿ.ಆರ್. ವಕೀಲರಿಂದಃ**

ದಾವೆಯನ್ನು ದಾಖಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಕಂದಾಯ ಇಲಾಖೆಯವರು ವಂಶಾವಳಿಯ ದಾಖಲಾತಿಯನ್ನು ನೀಡಿರುವುದಿಲ್ಲ. 1 ನೇ ಪ್ರತಿವಾದಿ ನನ್ನ ಮಾವನ ಹೆಂಡತಿ. 2 ನೇ ಪ್ರತಿವಾದಿ ನನ್ನ ಸೊಸೆ, ಸದರಿಯವರ ಮದುವೆ ಆಗಿದೆ. ಆಕೆಯ ಗಂಡನ ಹೆಸರು ಶಂಕರಪ್ಪ ಎಂದು ಇರುತ್ತದೆ. 2 ನೇ ಪ್ರತಿವಾದಿಯ ಗಂಡನ ಹೆಸರನ್ನು ದಾವೆಯಲ್ಲಿ ಕಾಣಿಸಿರುವುದಿಲ್ಲ ಎಂದರೆ ನಿಜ. 3 ನೇ ಪ್ರತಿವಾದಿ ನನ್ನ ಮಾವನ ಹೆಂಡತಿ. 3 ನೇ ಪ್ರತಿವಾದಿಯ ಗಂಡ ನನ್ನ ತಾಯಿಯ ತಮ್ಮ. ಸದರಿಯವರು ಜೀವಂತ ಇದ್ದಾರೆ. 4 ನೇ ಪ್ರತಿವಾದಿಯು ನನ್ನ ತಾಯಿಯ ತಂಗಿಯ ಮಗ. ನನ್ನ ತಾಯಿಯ ತಂಗಿಯ ಹೆಸರು ಈರವ್ವ. ಸದರಿಯವರು ಯಾವ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. 5 ನೇ ಪ್ರತಿವಾದಿಯು ನನ್ನ ಸಣ್ಣವ್ವಳಾದ ಈರವ್ವಳವಳ ಮಗಳು ಇರುತ್ತಾಳೆ. 6 ನೇ ಪ್ರತಿವಾದಿಯು ನನ್ನ ತಾಯಿಯ ತಮ್ಮ. 7 ನೇ ಪ್ರತಿವಾದಿಯು ನನ್ನ ತಾಯಿಯ ತಂಗಿ. 8 ನೇ ಪ್ರತಿವಾದಿಯು ನನ್ನ ತಾಯಿಯ ತಮ್ಮ. 9 ರಿಂದ 12 ನೇ ಪ್ರತಿವಾದಿಯರು ನನ್ನ ಅಕ್ಕನ ಮಕ್ಕಳು. ನನಗೆ ಇಬ್ಬರು ಅಕ್ಕಂದಿರು ಇರುತ್ತಾರೆ. ಸದರಿಯವರ ಮದುವೆಯಾದ ಬಳಿಕ ತೀರಿಕೊಂಡಿರುತ್ತಾರೆ. ನನ್ನ ತಾಯಿ ಫಕ್ಕೀರವ್ವ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಫಕ್ಕೀರವ್ವರವರು ಚಾಳಪ್ಪ ಹರಿಜನ ಎಂಬುವವರನ್ನು ಮದುವೆ ಆಗಿರುತ್ತಾರೆ. ಸದರಿಯವರು ಕೊಳಗಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಚಾಳಪ್ಪ ಇವರು ದಾವಾ ಆಸ್ತಿ ಸ.ನಂ. 32 ನೇದ್ದಕ್ಕೆ ಹೊಂದಿಕೊಂಡು ಇರುವ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಇರುತ್ತಾರೆ ಎಂದರೆ ನಿಜ. ಸದರಿ ಮನೆಯನ್ನು ಸರ್ಕಾರಿ ಅತಿಕ್ರಮಣ ಜಾಗದಲ್ಲಿ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದು ಗಾಂವಠಾಣ ಜಾಗ ಇರುತ್ತದೆ ಎಂದು ನುಡಿದಿರುತ್ತಾರೆ. ಗಾಂವಠಾಣ ಜಾಗವು ಸರ್ಕಾರಕ್ಕೆ ಸಂಬಂಧಪಟ್ಟ ಜಾಗ ಎಂದರೆ ನಿಜ. ಸದರಿ ಜಾಗವು ಈ ಮುಂಚೆ ಈರಪ್ಪ ಹರಿಜನ ಕುಟುಂಬಕ್ಕೆ ಸೇರಿದ್ದಂತಹದ್ದು ಆಗಿತ್ತು ಎಂದರೆ ಸರಿಯಲ್ಲ. ಚಾಳಪ್ಪ ಹರಿಜನ ಇವರು ಹಾನಗಲ್ ತಾಲ್ಲೂಕಿನ ಆಲೂರು ನಿವಾಸಿ ಎಂದರೆ ನಿಜ. ಸದರಿಯವರು ಕೊಳಗಿ ಗ್ರಾಮಕ್ಕೆ ಕೆಲಸ ಹುಡುಕಿಕೊಂಡು ಬಂದವನಾಗಿರುತ್ತಾನೆ ಎಂದರೆ ಸಾಕ್ಷಿಯು ನನ್ನ ತಾಯಿಯನ್ನು ಮದುವೆಯಾಗಿ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಚಾಳಪ್ಪನು ನಮ್ಮ ತಾಯಿಯನ್ನು ಮದುವೆಯಾದುದರ ಕುರಿತು ದಾಖಲಾತಿಗಳು ಇರುವುದಿಲ್ಲ. ನಿಮ್ಮ ವಂಶಾವಳಿಯಲ್ಲಿ ಚಾಳಪ್ಪನು ಮೃತಪಟ್ಟಿರುವ ಬಗ್ಗೆಯಾಗಲೀ, ಜೀವಂತವಾಗಿರುವ ಬಗ್ಗೆಯಾಲೀ

ನಮೂದಿಸಿರುವುದಿಲ್ಲ ಎಂದರೆ ನಿಜ. 1 ಮತ್ತು 2ನೇ ಪ್ರತಿವಾದಿಯವರ ತಂದೆಯನ್ನು ವಂಶಾವಳಿಯಲ್ಲಿ ಕಾಣಿಸಿರುವುದಿಲ್ಲ ಎಂದರೆ ನಿಜ. ನನ್ನ ಸಹೋದರಿಯರು ಯಾವ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ನೀಲವ್ವರವರು 1983 ನೇ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ ಎಂದರೆ ನಿಜ. 9 ರಿಂದ 12 ನೇ ಪ್ರತಿವಾದಿಯರ ತಾಯಿಯವರಾದ ಯಲ್ಲವ್ವರವರು 04-09-1996 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ನಿಜ. ನಾನು ಹಾಜರುಪಡಿಸಿದಂತಹ ಮರಣ ಪ್ರಮಾಣ ಪತ್ರಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ನಿಜ. ಸದರಿಯವರು ಅವರ ಜೀವಿತಾವಧಿಯಲ್ಲಿ ಆಸ್ತಿಯಲ್ಲಿ ಪಾಲು ವಿಭಾಗ ಬೇಕೆಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

-Sd-

**ಸಿವಿಲ್ ಜಡ್ಜ, ಮುಂಡಗೋಡ.**